**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>**

**<u>ಸಿಸಿ ನಂ.12/2017</u>**

**<u>ಚಾಸಾ-4/ಪಿಡಬ್ಲೂ-2</u>**

| | |
|---|---|
| **ಹೆಸರು** | ಅಬ್ದುಲ ಸಲೀಮ |
| **ತಂದೆ ಹೆಸರು** | ಅಬ್ದಲು ಖಯುಮ |
| **ವಯಸ್ಸು** | 45 ವರ್ಷಗಳು |
| **ಉದ್ಯೋಗ** | ಮುಖ್ಯ ಪೇದೆ |
| **ವಾಸ ಸ್ಥಳ** | ಯಡ್ರಾಮಿ |

**<u>ದಿನಾಂಕ 18.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.</u>**

2011 ರಿಂದ 2017 ಪೊಲೀಸ್ ಪೇದೆಯಾಗಿ ನೆಲೋಗಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 27.10.2016 ರಂದು ನಾನು, ಚಾಸಾ-1 ರವರು ಸೊನ್ನ ಮತ್ತು ಹರವಾಳ ಗ್ರಾಮಕ್ಕೆ ಹೋಗಿ ಮಧ್ಯಾಹ್ನ 2.00 ಗಂಟೆಗೆ ಮಾವನೂರ ಕ್ರಾಸ್ ಹತ್ತಿರ ಇದ್ದಾಗ ಚಾಸಾ-1 ರವರು ಮಾವನೂರ ಗ್ರಾಮದ ನಿಂಗರಾಯ ಗುಡಿಯ ಹತ್ತಿರ ಇಬ್ಬರು ವ್ಯಕ್ತಿಗಳು ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಬಂದಿದೆ ಎಂದು ನನಗೆ ತಿಳಿಸಿದರು. ನಂತರ ಇಬ್ಬರು ಪಂಚರನ್ನಾಗಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿದೆವು. ಅವರು ಒಪ್ಪಿಕೊಂಡ ಮೇರೆಗೆ ನಾವು ಮತ್ತು ಪಂಚರು ಸೇರಿ ಮಾವನೂರ ಗ್ರಾಮದ ನಿಂಗರಾಯ ಗುಡಿಯ ಹತ್ತಿರ ಮಧ್ಯಾಹ್ನ 2.30 ಗಂಟೆಗೆ ಹೋಗಿ ನೋಡಲಾಗಿ ಇಬ್ಬರು ಜನರು ರಟ್ಟಿನ ಬಾಕ್ಸನಲ್ಲಿ ಮದ್ಯವನ್ನು ಇಟ್ಟು ಜನರಿಂದ ಹಣ ಪಡೆದು

ಮದ್ಯ  ಮಾರಾಟ ಮಾಡುತ್ತಿದ್ದರು. ನಾವು ದಾಳಿ ಮಾಡುವಷ್ಟರಲ್ಲಿ ನಮ್ಮನ್ನು ನೋಡಿ ಅವರು ರಟ್ಟಿನ ಬಾಕ್ಸಗಳನ್ನು ಅಲ್ಲೇ ಬಿಟ್ಟು ಓಡಿ ಹೋದರು. ಒಂದು ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಮ್.ಎಲ್.ನ 160 ಒಸಿ ಪೌಚಗಳು ಇದ್ದವು. ಇನ್ನೊಂದು ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ 180 ಎಮ್.ಎಲ್.ನ 20 ಒಟಿ ಬಾಟಲಿಗಳು ದೊರೆತವು. ಅವುಗಳ ಒಟ್ಟು ಮೌಲ್ಯ ರೂ.6020/- ಆಗಿತ್ತು. ಅವುಗಳ ಪೈಕಿ ಒಂದು ಬಾಟಲಿಯನ್ನು  ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ ಅರಗಿನಿಂದ ಶೀಲಲ್ ಮಾಡಲಾಯಿತು. ಅವುಗಳ ಮೇಲೆ ಪಂಚರ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು. ಮಧ್ಯಾಹ್ನ 2.30 ರಿಂದ 3.30 ಗಂಟೆವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಲಾಯಿತು. ಬಾತ್ಮಿದಾರರನ್ನು ವಿಚಾರಿಸಲಾಗಿ ಓಡಿ ಹೋದ ವ್ಯಕ್ತಿಗಳ ಬಗ್ಗೆ ವಿಚಾರಿಸಲಾಗಿ ಅವರ ಹೆಸರು ಸದಾಶಿವ ತಂದೆ ಬಸಯ್ಯ ಗುತ್ತೇದಾರ ಇನ್ನೊಬ್ಬನ ಹೆಸರು ಮಂಜುನಾಥ ತಂದೆ ನಿಂಗಪ್ಪ ಕೋಡ್ಲಾ ಎಂದು ತಿಳಿಸಿದರು.  ನಂತರ ಮುದ್ದೆ ಮಾಲು, ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-1 ರವರು ಎಸ್.ಹೆಚ್.ಓ. ರವರಿಗೆ ಜ್ಞಾಪನ ಪತ್ರ ಮತ್ತು ಮುದ್ದೆ ಮಾಲನ್ನು ಮುಂದಿನ ಕ್ರಮಕ್ಕಾಗಿ ನೀಡಲಾಯಿತು. ನಾವು ಸ್ಯಾಂಪಲಗಾಗಿ ತೆಗೆದ ಮದ್ಯದ ಪೌಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಎಂ.ಒ.1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2ನೆ ಆರೋಪಿಯ ನೋಡಿ ಗುರುತಿಸಿರುತ್ತಾರೆ. 1ನೆ ಆರೋಪಿ ಗೈರು ಹಾಜರಿದ್ದು ಆತನ ಗುರುತಿಸುವಿಕೆ ತಕರಾರು ಇಲ್ಲವೆಂದು ಸೂಚಿಸಿರುತ್ತಾರೆ. ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದು ಅವರು ಅದನ್ನು ಬೆರಳಚ್ಚು ಮಾಡಿರುತ್ತಾರೆ. ಮಾವನೂರಿನ ಯಾವ ದಿಕ್ಕಿಗೆ ನಿಂಗರಾಯನ ಗುಡಿಯ ಇದೆ ಎಂದರೆ ಉತ್ತರ ದಿಕ್ಕಿಗೆ ಇದೆ. ಮಾವನೂರಿನ ಯಾವ ದಿಕ್ಕಿಗೆ ನಿಂಗರಾಯನ ಗುಡಿಯ ಇದೆ ಎಂದರೆ ಪಶ್ಚಿಮ ದಿಕ್ಕಿಗೆ ಇದೆ

ಎಂದರೆ ನನಗೆ ನೆನಪಿಲ್ಲ. ಆರೋಪಿತರಿಂದ 5-6 ಜನರು ಮದ್ಯವನ್ನು ಖರೀದಿಸುತ್ತಿದ್ದರು ಎಂದರೆ ಸರಿ. ಯಾರು ಮೊದಲು ಮತ್ತು ನಂತರ ಓಡಿ ಹೋದರು ಎಂದರೆ ನನಗೆ ಗೊತ್ತಿಲ್ಲ.

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ದಾಳಿ ಮಾಡಿಲ್ಲ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೆ ಸಂಬಂಧವಿಲ್ಲದಿದ್ದರೂ ಸಹ ಅಂಕಿ ಅಂಶಗಳಿಗೋಸ್ಕರ ಠಾಣೆಯಲ್ಲೆ ಕುಳಿತು ಸುಳ್ಳು ಪ್ರಕರಣ ದಾಖಲಿಸಿ ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು**
ಜೇವರ್ಗಿ